ಕೊಡಲು ಬರುವ ಗೆಣೆಕಾರ ನಾಯಿಗಳೂ ಬಲೆಯೊಳಗೆ ನುಸುಳಿ ನೆಗೆದಾಡಿ ಬಲೆಯನ್ನು ಹಾಳು ಮಾಡುತ್ತಿದ್ದವು. ಬಲೆಯೊಳಗೆ ಸಿಕ್ಕಿ ಉಳಿದ ಪುಡಿಮೀನಿನ ಆಸೆಗೆ ಬರುತ್ತಿದ್ದ ಅವು ಕೊನೆಗೆ ಅವನ ಬಲೆಯನ್ನೇ ಸಿಕ್ಕುಸಿಕ್ಕಾಗಿಸಿ ಫಜೀತಿ ಮಾಡಿ ಕಿತ್ತು ಹಾಕುತ್ತಿದ್ದವು. ಹರಿದ ಬಲೆಯನ್ನು ಹುಡುಕಿ ಹೊಲೆಯುವುದು ಬಲು ನಾಜೂಕಿನ ಕೆಲಸ. ದಂಡಪಾಣಿ ವಾರದಲ್ಲಿ ಮೂರು ದಿನ ಮೀನು ಹಿಡಿದರೆ ನಾಲ್ಕು ದಿನ ಬಲೆ ತೇಪೆ ಹಾಕುವುದರಲ್ಲಿ ಮಗ್ನನಾಗಿರುತ್ತಿದ್ದ. ನಾಯಿಗಳು ಬಲೆಯನ್ನು ಕಚ್ಚಿ ಎಳೆದಾಡುವುದು ತಮ್ಮ ಬೇಟೆಯ ರಿಹರ್ಸಲ್‌ಗಾಗಿ ನಡೆಸುವ ಒಂದು ಬೌದ್ಧಿಕ ಕಸರತ್ತಿನಂತೆ ನಮಗೆ ಕಾಣುತ್ತಿತ್ತು.

"ಈ ಬೋ... ಮುಂಡೆಗೆ ಅವುರನ್ನೆಲ್ಲಾ ಕರೀಬ್ಯಾಡ ಅಂದ್ರೂ ಕೇಳಲ್ಲ. ಊರ ಹಡದಿ ಇವಳು. ಎಲ್ಲಾ ಮಿಂಡ್ರನ್ನೂ ಗುಡ್ಡೆ ಹಾಕ್ಕೋತ್ತಾಳೆ" ಎಂದು ಕಟ್ಟಾಕಿ ಹೊಡೆಯುತ್ತಿದ್ದನು. ಅದೇ ದಂಡಪಾಣಿ ಸಂಜೆ ಕುಡಿದು ಬಂದಾಗ ಬೆಳಗಿನ ಕತೆ ಪೂರಾ ಉಲ್ಟಾ ಆಗಿರುತ್ತಿತ್ತು. ಬೀದಿ ಜನ ಅಸಹ್ಯ ಎನಿಸುವಷ್ಟರ ಮಟ್ಟಿಗೆ ರಾಣಿಯನ್ನು ಹಿಡಿದು ಮುದ್ದಾಡುತ್ತಿದ್ದನು. ಅವನ ಹೆಂಡತಿ ಸುಶೀಲಕ್ಕ ಈ ಸವತಿ ಪ್ರೇಮ ಸಹಿಸಲಾರದೆ ಕೆಂಡಾಮಂಡಲವಾಗಿ ರೇಗಾಡುತ್ತಿದ್ದಳು. ಚಕ್ಕಲಿ, ಬೋಟಿ, ಬನ್ನು, ಪಕೋಡ ಎಲ್ಲಾ ಕಟ್ಟಿಸಿಕೊಂಡು ಬಂದು ಅದಕ್ಕೆ ತಿನ್ನಿಸುತ್ತಿದ್ದನು. ಬೆಳಗಿನ ಹೊಡೆತಗಳನ್ನೆಲ್ಲಾ ಮರೆತ ರಾಣಿ ತಿಂಡಿ ತಿನ್ನುತ್ತಾ ಸಲಿಗೆಯಿಂದ ಅವನ ಮುಖವನ್ನೇ ಹಿಡಿದು ನೆಕ್ಕುತ್ತಿದ್ದಳು. ಇದನ್ನೆಲ್ಲಾ ಅವನ ಇನ್ನೊಂದು ಬಾಜು ಮನೆಯಲ್ಲಿ ವಾಸವಿದ್ದ ಅವರಣ್ಣ ಕಣ್ಣಪ್ಪ ಕೂಡ ಸಹಿಸುತ್ತಿರಲಿಲ್ಲ. "ಅಡೇ ಪಾಣಿ, ನಿಂಗಾಯ ಸೆರ್ಪುಲೆ ಅಡ್ಡಿರೆ ಪೋಡಾ ಉಳ್ಳೆ" ಎಂದು ಗದರಿಸುತ್ತಿದ್ದ. ಅಕ್ಕಪಕ್ಕದಲ್ಲಿ ವಾಸವಿದ್ದ ನಾವೆಲ್ಲಾ ಟೀವಿ ಸೀರಿಯಲ್ಲುಗಳ ರೀತಿ ಇದನ್ನು ದಿನವೂ ನಿಂತು ನೋಡುವುದು ಆತನಿಗೆ ಇಷ್ಟವಾಗುತ್ತಿರಲಿಲ್ಲ. ತನ್ನಂತೆ ಶಿಸ್ತಾಗಿ ಕುಡಿದು ಬಂದು ತೆಪ್ಪಗೆ ಉಂಡು ತಮ್ಮನೂ ಮಲಗಲಿ ಎಂಬ ಅವನ ಆಸೆಗೆ ಫುಲ್ ಲೋಡಾಗಿರುತ್ತಿದ್ದ ದಂಡಪಾಣಿ ಡೋಂಟ್ ಕೇರ್ ಆಗಿದ್ದ. ಈ ಅಪೂರ್ವ ದೃಶ್ಯಾವಳಿಗಳೇ ನಮಗೆ ಆ ಕಾಲದ ಸಿನಿಮಾಗಳಾಗಿದ್ದವು.

ಒಂದು ಸಲ ಪಕ್ಕದ ಮನೆಯ ದಂಡಪಾಣಿಯ ಮನೆಯಲ್ಲಿ "ಮೀನು ಸಾರು ಇಸ್ಕೊಂಡು ಬಾ" ಎಂದು ಅಮ್ಮ ಬಟ್ಟಲು ಕೊಟ್ಟು ಕಳಿಸಿದ್ದರು. ಅದು ರಾತ್ರಿಯ ಸಮಯವಾಗಿದ್ದರಿಂದ ದಂಡಪಾಣಿ ಊಟಕ್ಕೆ ಕುಳಿತಿದ್ದ. ಬಾಳೆಯ ಎಲೆಯ ಮೇಲಿನ ಅನ್ನವನ್ನು ಕಲೆಸಿ ಸಮಪಾಲು ಮಾಡಿ ಅರ್ಧವನ್ನು ರಾಣಿಗರ್ಪಿಸಿ ಉಳಿದ ಭಾಗವನ್ನು ತಾನು ಉಣ್ಣುತ್ತಿದ್ದ. ಈ ದೃಶ್ಯವನ್ನು ನಾನು ನೋಡಿದ್ದರಿಂದ ಮುಜುಗರಕ್ಕೊಳಗಾದ ಸುಶೀಲಕ್ಕ, "ಅಂಗ್ ಪಾರ್, ಅಂದ ಪುಳ್ಳೆ ಎಲ್ಲಮೂ ಪಾಕ್ರ. ನಿನಕೆನ್ನ ನಾಚಿಕೇಯ ವರಾದ" ಎಂದು ಹೇಳಿದಳು. ಇದ್ಯಾವುದನ್ನು ಕೇಳಿಸಿಕೊಳ್ಳದ ಮನಃಸ್ಥಿತಿಯಲ್ಲಿ ದಂಡಪಾಣಿ ಇರುತ್ತಿರಲಿಲ್ಲ. ಮಕ್ಕಳು ಮರಿಯಿಲ್ಲದ ಆತನಿಗೆ ರಾಣಿಯೇ ಮಗನೂ ಮಗಳೂ ಆಗಿದ್ದಳು.

ಮಳೆಗಾಲದಲ್ಲಿ ನಾಯಿಗಳ ಸಂಗಮವಾದಾಗ ಅವುಗಳನ್ನು ಹೊಡೆದು ಬಿಡಿಸುವುದೂ ನಮಗೆ ಮೋಜಿನ ಸಂಗತಿಯಾಗಿತ್ತು. ಆ ಸಮಯದಲ್ಲಿ ಆ ಪ್ರೇಮಿಗಳು ಅದೆಷ್ಟು ಶಾಪ ನಮ್ಮ ಮೇಲೆ ಸುರಿಸಿದ್ದಾವೋ ನಮಗ್ಯಾರಿಗೂ ಅಂದಾಜಿಲ್ಲ. ಈ ನಾಯಿಗಳು ಬಿಟ್ಟರೆ ನಮ್ಮ ಎರಡನೆಯ ಶತ್ರುಗಳಾಗಿದ್ದವು ಓತಿಕ್ಯಾತಗಳು. ಬೇಲಿ ಸಾಲಿನಲ್ಲಿ ಓಡಾಡುವ ಇವುಗಳ ಬೇಟೆಯನ್ನು ಒಂದು ಶ್ರದ್ಧೆಯಂತೆ ನಾವು ಮಾಡುತ್ತಿದ್ದೆವು. 'ಪೈಗಂಬರರು ಬಚ್ಚಿಟ್ಟುಕೊಂಡಿದ್ದ ಗುಹೆಯ ಮೇಲೆ ಕೂತು ಅವರು ಇಲ್ಲೇ ಒಳಗಿದ್ದಾರೆಂದು ಕುತ್ತಿಗೆ ಕುಣಿಸಿ ಶತ್ರುಗಳಿಗೆ ಸೂಚನೆ